

# ಗರ್ಭಾಶಯ-ಗರ್ಭಕೊರಳಿನ ಕ್ಯಾನ್ಸರ್ ಎರಡೂ ಬೇರೆ ಬೇರೆ

ಹೆಚ್ಚಿನ ಮಹಿಳೆಯರಿಗೆ ಗರ್ಭಾಶಯದ ಕ್ಯಾನ್ಸರ್ ಹಾಗೂ ಗರ್ಭಕೊರಳಿನ (ಸರ್ವೈಕಲ್) ಕ್ಯಾನ್ಸರ್ ಬಗೆಗೆ ವ್ಯತ್ಯಾಸ ತಿಳಿದಿರದೆ ಎರಡೂ ಒಂದೇ ಎಂದುಕೊಂಡಿರುತ್ತಾರೆ. ಆದರೆ ಇದು ತಪ್ಪು. ಗರ್ಭಕೊರಳು ಅಥವಾ ಸರ್ವೈಕಲ್ ಕ್ಯಾನ್ಸರ್‌ಗೆ ಸೂಕ್ತ ಸ್ಕ್ರೀನಿಂಗ್ ಪರೀಕ್ಷೆ ಹಾಗೂ ವ್ಯಾಕ್ಸಿನ್ ಅಥವಾ ಚುಚ್ಚುಮದ್ದುಗಳು ಇದೆ. ಈ ಎರಡೂ ಕ್ಯಾನ್ಸರ್‌ನಲ್ಲಿ ಅಪಾಯಕಾರಿ ಅಂಶಗಳು ಹಾಗೂ ಚಿಕಿತ್ಸೆ ಎಲ್ಲವೂ ಬೇರೆ ಬೇರೆಯೇ ಆಗಿರುತ್ತದೆ.

ಸರ್ವೈಕಲ್ ಕ್ಯಾನ್ಸರ್ (ಗರ್ಭಕೊರಳಿನ) ನಮ್ಮ ಭಾರತದಲ್ಲಿ, ಅದರಲ್ಲೂ ಹಳ್ಳಿಗಾಡಿನಲ್ಲಿ, ಬಡವರಲ್ಲಿ, ಬೇಗನೆ ಮದುವೆಯಾಗಿ ಹೆಚ್ಚು ಮಕ್ಕಳನ್ನು ಹಡೆದವರಲ್ಲಿ, ಧೂಮಪಾನ ಮಾಡುವವರಲ್ಲಿ, ಹೆಚ್.ಪಿ.ವಿ ವೈರಸ್ ಸೋಂಕುಂಟಾದವರಲ್ಲಿ, ಒಬ್ಬರಿಗಿಂತ ಹೆಚ್ಚು ಪುರುಷರೊಂದಿಗೆ ಲೈಂಗಿಕ ಸಂಬಂಧ ಇರುವವರಲ್ಲಿ, 3550 ವಯೋಮಾನದವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ ಹಾಗೂ ತಡವಾಗಿ ಪತ್ತೆ ಹಚ್ಚಲ್ಪಡುತ್ತದೆ. ರೇಡಿಯೋಥೆರಪಿ (ವಿಕಿರಣ ಚಿಕಿತ್ಸೆ) ಮುಖ್ಯ ಚಿಕಿತ್ಸಾ ಕ್ರಮ.

ಈ ಮೇಲೆ ತಿಳಿಸಿದ ಗರ್ಭಾಶಯ ಅಥವಾ ಎಂಡೋಮೆಟ್ರಿಯಲ್ ಕ್ಯಾನ್ಸರ್ ಬೊಜ್ಜು ಇರುವವರಲ್ಲಿ, ಪಟ್ಟಣದವರಲ್ಲಿ, ಮುಂದುವರೆದ ರಾಷ್ಟ್ರಗಳಲ್ಲಿ, ಶ್ರೀಮಂತರಲ್ಲಿ, 5070ರ ವಯೋಮಾನದ ಮಹಿಳೆಯರಲ್ಲಿ ಇದು ಹೆಚ್ಚು ಕಂಡುಬರುತ್ತದೆ. ಇದು ಬೇಗ ಪತ್ತೆ ಹಚ್ಚಲ್ಪಡುತ್ತದೆ. ಗರ್ಭಕೋಶ ಹಾಗೂ ಅಂಡಾಶಯ ತೆಗೆಯುವ ಶಸ್ತ್ರಚಿಕಿತ್ಸೆ ಚಿಕಿತ್ಸೆಯೇ ಮುಖ್ಯ ಚಿಕಿತ್ಸಾ ಕ್ರಮ. ಹಾಗಾಗಿ ಈ ವ್ಯತ್ಯಾಸವನ್ನು ಪ್ರತಿ ಮಹಿಳೆಯರು ತಿಳಿದಿರುವುದು ಅತಿ ಅವಶ್ಯ.

## ರೋಗ ಲಕ್ಷಣಗಳೇನು?

ಹೆಚ್ಚಿನ ಸಂದರ್ಭದಲ್ಲಿ ಮುಟ್ಟು ನಿಂತ ಮೇಲೆ ರಕ್ತಸ್ರಾವ ಕಂಡುಬರುವುದು. ಇದು ಕಡಿಮೆ ಅಥವಾ ಅಧಿಕ ಪ್ರಮಾಣದಲ್ಲಿ ಇರಬಹುದು. ಇನ್ನು ಕೆಲವರಲ್ಲಿ ಮುಟ್ಟು ನಿಲ್ಲುವ ಮೊದಲೇ ಅನಿಯಮಿತ ಹಾಗೂ ಅಧಿಕ ರಕ್ತಸ್ರಾವವೂ ಆಗಬಹುದು. ಕೆಲವೊಮ್ಮೆ ನೀರಿನಂತಹ ವಾಸನೆಯುಳ್ಳ ಸ್ರಾವವು ಆಗಬಹುದು. ಈ ಕ್ಯಾನ್ಸರ್‌ನಲ್ಲಿ ಕೆಲವು ಬಾರಿ ನೋವು ದಿನದ ಒಂದೇ ಸಮಯದಲ್ಲಿ ಉಂಟಾಗಬಹುದು. (ಸಿಮ್ಸನ್ ನೋವು)

## ಪತ್ತೆ ಹಚ್ಚುವುದು ಹೇಗೆ?

ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಪರೀಕ್ಷೆ ಮಾಡಿಸಿ ಲೋಳೆಪದರದ ಬಯಾಪ್ಸಿ ಮಾಡಿಸುವುದು ಅತಿ ಅವಶ್ಯ. ಬಯಾಪ್ಸಿ ಮಾಡುವಾಗ ಗರ್ಭಕೋಶದ ಎಲ್ಲಾ ಭಾಗಗಳಿಂದಲೂ ಲೋಳೆಪದರವನ್ನು ಕ್ಯುರೆಟ್‌ನ ಸಹಾಯದಿಂದ ತೆಗೆಯುವುದು ಅತಿ ಅವಶ್ಯ. ಕ್ಯಾನ್ಸರ್ ಯಾವ ಹಂತದಲ್ಲಿದೆ ಹಾಗೂ ಎಷ್ಟು ಹರಡಿದೆ ಎನ್ನುವುದನ್ನು ಪತ್ತೆಹಚ್ಚಲು ಎಂ.ಆರ್.ಐ ಮತ್ತು ಸಿ.ಟಿ ಸ್ಕ್ಯಾನ್ ಬೇಕಾಗಬಹುದು.

ಗರ್ಭಾಶಯದ ಕ್ಯಾನ್ಸರ್‌ನ ಹರಡುವಿಕೆ: ಶೇ.75ರಷ್ಟು ಜನರಲ್ಲಿ ಕ್ಯಾನ್ಸರ್ ಗರ್ಭಕೋಶಕ್ಕೆ ಸೀಮಿತವಾಗಿದ್ದಾಗಲೇ ಪತ್ತೆಯಾಗುತ್ತದೆ ಮತ್ತು ಈ ಕ್ಯಾನ್ಸರ್ ನೇರವಾಗಿ ಗರ್ಭಕೊರಳಿಗೆ ಮತ್ತು ಮಧ್ಯಪದರಕ್ಕೆ ಹರಡುತ್ತದೆ. ಇದು ರಕ್ತಪ್ರವಾಹದ ಮೂಲಕ ಹಾಗೂ ದುಗ್ಧರಸದ ಮೂಲಕವೂ ಸ್ವಲ್ಪ ತಡವಾಗಿಯೂ ಹರಡುತ್ತದೆ.

ಸಾಮಾನ್ಯವಾಗಿ ಎಲ್ಲಾ ಕ್ಯಾನ್ಸರ್‌ಗಳಲ್ಲೂ ಊಟ ಸೇರದೇ ಇರುವುದು, ತೂಕ ಕಡಿಮೆ ಆಗುವುದು ಇವೆಲ್ಲಾ ಸಾಮಾನ್ಯವಾಗಿದ್ದರೂ ಗರ್ಭಾಶಯದ ಕ್ಯಾನ್ಸರ್‌ನಲ್ಲಿ ಹೀಗಾಗುವುದಿಲ್ಲ.

**ಯಾರಲ್ಲಿ ಗರ್ಭಾಶಯ ಕ್ಯಾನ್ಸರ್ ಸಂಭವ ಕಡಿಮೆ?**

ನಿಯಮಿತ ವ್ಯಾಯಾಮ ಮಾಡುವವರಲ್ಲಿ, ಹೆಚ್ಚು ಮಕ್ಕಳನ್ನು ಹಡೆದವರು ಅಥವಾ ಹೆಚ್ಚು ಬಾರಿ ಗರ್ಭಧಾರಣೆಯಾದವರಲ್ಲಿ ಕ್ಯಾನ್ಸರ್ ಸಂಭವ ಕಡಿಮೆ.

## ಚಿಕಿತ್ಸೆ ಹೇಗೆ?

ಬಯಾಪ್ಸಿಯಿಂದ ಒಮ್ಮೆ ಕ್ಯಾನ್ಸರ್ ಇದೆ ಎಂದು ಪತ್ತೆಯಾದರೆ ನಂತರ ಎಂ.ಆರ್.ಐ ಸ್ಕ್ಯಾನ್‌ನಿಂದ ಕ್ಯಾನ್ಸರ್ ಯಾವ ಹಂತದಲ್ಲಿದೆ ಎಂದು ತಿಳಿದುಕೊಂಡು ಚಿಕಿತ್ಸೆ ಕೊಡಬೇಕು. ಆರಂಭದ ಹಂತದಲ್ಲಿ ಗರ್ಭಕೋಶ ಅಂಡಾಶಯಗಳನ್ನು ತೆಗೆಯುವ ಶಸ್ತ್ರಚಿಕಿತ್ಸೆಯೇ ಅತಿಮುಖ್ಯ ಶಸ್ತ್ರಚಿಕಿತ್ಸೆ. ಒಮ್ಮೆ ಕ್ಯಾನ್ಸರ್ ಗರ್ಭಕೊರಳಿಗೆ ಹರಡಿದ್ದರೆ ಅದಕ್ಕೆ ಸಂಪೂರ್ಣವಾಗಿ ಗರ್ಭಕೋಶದ ಜೊತೆಗೆ ಯೋನಿ ಮೇಲ್ಭಾಗವನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದು ನಂತರ ಯಾವ ಹಂತದಲ್ಲಿದೆ ಎಂದು ತಿಳಿದುಕೊಂಡು ರೇಡಿಯೋಥೆರಪಿ ಮತ್ತು ಕೀಮೋಥೆರಪಿ ಕೊಡಬೇಕಾಗುತ್ತದೆ. ಎಲ್ಲವನ್ನೂ ತಜ್ಞ ವೈದ್ಯರ ಸಲಹೆಯ ಮೇರೆಗೆ ಮಾಡಬೇಕಾಗುತ್ತದೆ.

## ತಡೆಗಟ್ಟಬಹುದು

ಗರ್ಭಾಶಯದ ಕ್ಯಾನ್ಸರನ್ನು ಬೇಗನೆ ಪತ್ತೆ ಹಚ್ಚಲು ಯಾವುದೇ ಸೂಕ್ತ ಹಾಗೂ ನಿಖರವಾದ ಸ್ಕ್ರೀನಿಂಗ್ ಪರೀಕ್ಷೆಗಳು, ಚುಚ್ಚುಮದ್ದು ಇಲ್ಲದಿರುವುದರಿಂದ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದೇ ಅತಿಮುಖ್ಯ.

ಅತಿಯಾದ ಬೊಜ್ಜು, ಮಧುಮೇಹ, ಏರುರಕ್ತದೊತ್ತಡ ಇವೆಲ್ಲಾ ಗರ್ಭಾಶಯದ ಕ್ಯಾನ್ಸರ್‌ನೊಂದಿಗೆ ಹೆಚ್ಚಾಗಿ ತಳುಕಿ ಹಾಕಿ ಕೊಂಡಿರುವುದರಿಂದ ಮಹಿಳೆಯರು ಉತ್ತಮ ಜೀವನಶೈಲಿ ರೂಪಿಸಿಕೊಳ್ಳಬೇಕು. ನಿಯಮಿತ ದೈಹಿಕ ಚಟುವಟಿಕೆ (ದಿನಾ ಕನಿಷ್ಠ ಒಂದೆರಡು ಗಂಟೆಗೂ ಹೆಚ್ಚು) ಶೇ.23ರಷ್ಟು ಗರ್ಭಾಶಯದ ಕ್ಯಾನ್ಸರ್ ಬರುವ ಸಂಭವ ಕಡಿಮೆ ಮಾಡುತ್ತದೆ.

ಋತುಬಂಧದಲ್ಲಿ ಉಂಟಾದ ತೊಂದರೆಗಳನ್ನು ತಪ್ಪಿಸಲು ದೀರ್ಘಾವಧಿಯ ಹಾರ್ಮೋನು ಪುನರ್ಭರಿಸುವ ಚಿಕಿತ್ಸೆಯನ್ನು ತೆಗೆದುಕೊಳ್ಳುವಾಗ ಈಸ್ಟ್ರೋಜನ್ ಹಾರ್ಮೋನಿನ ಜೊತೆಗೆ ಪ್ರೊಜೆಸ್ಟಿರಾನ್ ಹಾರ್ಮೋನುಗಳನ್ನು ಸೇರಿಸಿ ತೆಗೆದುಕೊಳ್ಳಬೇಕಾಗುತ್ತದೆ. ನಿಯಮಿತವಾಗಿ ತಜ್ಞ ವೈದ್ಯರ ಸೂಕ್ತ ಮೇಲ್ವಿಚಾರಣೆಯಲ್ಲಿ ಇರಬೇಕಾಗುತ್ತದೆ.

ಮುಟ್ಟು ನಿಲ್ಲುವ ಹಂತದಲ್ಲಿ ಅನಿಯಮಿತ ಹಾಗೂ ಅತಿಯಾದ ರಕ್ತಸ್ರಾವ ಉಂಟಾಗುತ್ತಿದ್ದರೆ ಅದನ್ನು ಮುಟ್ಟು ನಿಲ್ಲಲು ಹೀಗಾಗುತ್ತಿದೆ ಎಂದು ನಿರ್ಲಕ್ಷಿಸದೇ ಸೂಕ್ತ ತಜ್ಞವೈದ್ಯರಿಂದ ತಪಾಸಣೆ ಮಾಡಿಕೊಂಡು, ಅಗತ್ಯವಿದ್ದರೆ ಬಯಾಪ್ಸಿ ಮಾಡಿಸಿ, ಚಿಕಿತ್ಸೆ ತೆಗೆದುಕೊಂಡು ನಿಯಮಿತವಾಗಿ ವೈದ್ಯರ ಮೇಲ್ವಿಚಾರಣೆಯಲ್ಲಿ ಇರಬೇಕು.

ಯಾವುದೇ ಮಹಿಳೆಗೆ ಮುಟ್ಟು ನಿಂತ ಮೇಲೆ ರಕ್ತಸ್ರಾವವಾದರೆ ಅವರ ಸೂಕ್ತ ಚರಿತ್ರೆ ತೆಗೆದುಕೊಂಡು ಅಲ್ಟ್ರಾಸೌಂಡ್ ಪರೀಕ್ಷೆ ಹಾಗೂ ಬಯಾಪ್ಸಿ ಇತ್ಯಾದಿ ನಡೆಸಿ ಗರ್ಭಾಶಯದ ಕ್ಯಾನ್ಸರ್ ಇಲ್ಲವೆಂದು ಖಚಿತಪಡಿಸಿಕೊಳ್ಳಬೇಕು. ಮುಟ್ಟಿನ ಸಂಬಂಧ ಯಾವುದೇ ತೊಂದರೆಗಳಿದ್ದಾಗಲೂ ಸಂಕೋಚದಿಂದ ತಜ್ಞವೈದ್ಯರ ಸಲಹೆಗಳನ್ನು ತೆಗೆದುಕೊಳ್ಳದೇ ಸೂಕ್ತಪರೀಕ್ಷೆ ಮಾಡಿಕೊಳ್ಳದೇ ಇದ್ದರೆ ತಡವಾಗಿ ಕ್ಯಾನ್ಸರ್ ಪತ್ತೆಯಾದಾಗ ಚಿಕಿತ್ಸೆ ಕಷ್ಟವಾಗಬಹುದು. ಕಾಯಿಲೆ ಬಗ್ಗೆ ಸೂಕ್ತ ಅರಿವು ಮೂಡಿಸಿಕೊಂಡು ಬೇಗನೆ ಚಿಕಿತ್ಸೆ ತೆಗೆದುಕೊಂಡರೆ ಸುರಕ್ಷಿತ ಜೀವನವನ್ನು ನಡೆಸಬಹುದು.

ಲೇಖಕಿ ಭದ್ರಾವತಿಯಲ್ಲಿ ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞೆ.

**ಸಂಪರ್ಕ: 94803 53878**